# <u>ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,</u>

## <u>ನಂಜನಗೂಡು</u>

**ಸಿ.ಸಿ. ನಂ.1258-2016** **ಡಿ .ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಉಮೇಶ<br>ಲೇ.ಮಹದೇವ<br>36 ವರ್ಷ<br>ಗಾರೇ ಕೆಲಸ<br>ಗೊದ್ದನಪುರ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 20-02-2023. |

**<u>ಮುಖ್ಯ ವಿಚಾರಣೆಃ ಶ್ರೀ ಕೆ.ಎಸ್.ಕೆ ವಕೀಲರಿಂದಃ</u>**

ಪಿರ್ಯಾದಿದಾರರು ನನ್ನ ಚಿಕ್ಕಪ್ಪನಾಗಬೇಕು. ನನ್ನ ಮತ್ತು ಪಿರ್ಯಾದಿದಾರರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ. ನನ್ನ ಬಳಿ ಬೈಕ್ ಇಲ್ಲದೇ ಇದ್ದ ಕಾರಣ ಪಿರ್ಯಾದಿದಾರರಾದ ನನ್ನ ಚಿಕ್ಕಪ್ಪ ಬೈಕ್ ಕೊಡಿಸುವುದಾಗಿ ಹೇಳಿ ಅವರೇ ಅಕೌಂಟ್ ಅನ್ನು ತೆರೆಸಿ ಚೆಕ್ ಬುಕ್ ಅನ್ನು ಪಡೆದುಕೊಂಡು ತನ್ನ ಬಳಿ ಇಟ್ಟುಕೊಂಡಿದ್ದರು. ಆದರೆ ಬೈಕ್ ಅನ್ನು ಕೊಡಿಸಿರುವುದಿಲ್ಲ ಮತ್ತು ಚೆಕ್ ಬುಕ್ ಅನ್ನು ವಾಪಸ್ಸು ಕೊಟ್ಟಿರುವುದಿಲ್ಲ.

2. ತದನಂತರ ಪಿರ್ಯಾದಿದಾರರ ಪತ್ನಿಯವರು ಅವರ ಸಹೋದರ-ಸಹೋದರಿಯವರ ವಿರುದ್ಧ ವಿಭಾಗಕ್ಕಾಗಿ ದಾವೆ ಸಲ್ಲಿಸಿದ್ದು ಆ ಸಮಯ ನನ್ನನ್ನು ಸಾಕ್ಷಿ ನುಡಿಯುವಂತೆ ಕರೆದಿದ್ದು ನಾನು ಒಪ್ಪದೇ ಇದ್ದುದ್ದರಿಂದ ನನ್ನ ಮತ್ತು ಪಿರ್ಯಾದಿದಾರರ ನಡುವೆ ಗಲಾಟೆ ಆಗಿರುತ್ತದೆ. ನನ್ನ ಮತ್ತು ಪಿರ್ಯಾದಿದಾರರ ನಡುವೆ ಗಲಾಟೆ ಆದ ನಂತರ ನಾನು ಬೈಕ್ ಕೊಡಿಸಲು ಕೊಟ್ಟಿದ್ದಂತಹ ಚೆಕ್ ಬುಕ್ ಅನ್ನು ದುರುಪಯೋಗಪಡಿಸಿಕೊಂಡು ಈ ಪಿರ್ಯಾದನ್ನು ನನ್ನ ವಿರುದ್ಧ ದಾಖಲಿಸಿರುತ್ತಾರೆ.

3. ನನ್ನ ತಾಯಿ ಮತ್ತು ಮಲ್ಲೇಗೌಡರ ಹೆಂಡತಿ ದೊಡ್ಡಮ್ಮ–ಚಿಕ್ಕಮ್ಮನ ಮಕ್ಕಳಾಗಬೇಕು. ಮಲ್ಲೇಗೌಡರ ಹೆಂಡತಿಯವರು ಸಲ್ಲಿಸಿದ್ದ ದಾವೆಯೂ ಇನ್ನೂ ಬಾಕಿ ಇರುತ್ತದೆ. ಆದುದರಿಂದ ಪಿರ್ಯಾದಿದಾರರು ನನ್ನ ವಿರುದ್ಧ ಸಲ್ಲಿಸಿರುವ ಪಿರ್ಯಾದನ್ನು ವಜಾಕರಿಸಬೇಕಾಗಿ ಪ್ರಾರ್ಥನೆ.

(ಪಾಟೀ ಸವಾಲಿಗೆ ಪಿರ್ಯಾದಿ ಪರ ವಕೀಲರು ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**